## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ವೇತನ ಶ್ರೇಣಿಗಳ ಪರಿಷ್ಕರಣೆ ಮತ್ತು ಇತರ ಸಂಬಂಧಿತ ಆದೇಶಗಳು.

**ಓದಲಾಗಿದೆ:** 1. ದಿನಾಂಕ 22.07.2024ರ ಸರ್ಕಾರಿ ಆದೇಶ ಸಂಖ್ಯೆ: ಆಇ 21 ಎಸ್‌ಆರ್‌ಪಿ 2024.

2. ದಿನಾಂಕ 17.08.2024ರ ಅಧಿಸೂಚನೆ ಸಂಖ್ಯೆ: ಆಇ 21 ಎಸ್‌ಆರ್‌ಪಿ 2024.

**ಪ್ರಸ್ತಾವನೆ:**

ರಾಜ್ಯ ಸರ್ಕಾರದ ನೀತಿಯಂತೆ, 7ನೇ ರಾಜ್ಯ ವೇತನ ಆಯೋಗದ ಸಂಪುಟ I ರಲ್ಲಿನ ಶಿಫಾರಸ್ಸುಗಳನ್ನು ಮೇಲೆ (1) ರಲ್ಲಿ ಓದಲಾದ ದಿನಾಂಕ 22.07.2024ರ ಸರ್ಕಾರಿ ಆದೇಶದಲ್ಲಿ ನಮೂದಿಸಿರುವಂತೆ ಅಂಗೀಕರಿಸಲಾಗಿರುತ್ತದೆ. ಅದರಂತೆ, ಸದರಿ ಆದೇಶದಲ್ಲಿ ಪರಿಷ್ಕೃತ ಮುಖ್ಯ ವೇತನ ಶ್ರೇಣಿ ಮತ್ತು 25 ಪರಿಷ್ಕೃತ ಸ್ಥಾಯಿ ವೇತನ ಶ್ರೇಣಿಗಳನ್ನು, ವೇತನ ಸಂಬಂಧಿತ ಭತ್ಯೆಗಳು ಮತ್ತು ಪರಿಷ್ಕೃತ ಪಿಂಚಣಿಯನ್ನು ಅನುಷ್ಠಾನಗೊಳಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ 17.08.2024ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024ನ್ನು ಅಧಿಸೂಚಿಸಲಾಗಿರುತ್ತದೆ. ಆದುದರಿಂದ, ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸುವ, ಪಿಂಚಣಿ ಪರಿಷ್ಕರಣೆ ಮತ್ತು ವೇತನ ಸಂಬಂಧಿತ ಭತ್ಯೆಗಳ ಪರಿಷ್ಕರಣೆ ಕುರಿತಂತೆ ವಿಸ್ತೃತವಾದ ಆದೇಶಗಳನ್ನು ಹೊರಡಿಸುವುದು ಅಗತ್ಯವೆಂದು ಪರಿಗಣಿಸಲಾಗಿರುತ್ತದೆ. ಅದರಂತೆ, ರಾಜ್ಯ ಸರ್ಕಾರವು ಈ ಕೆಳಕಂಡ ಆದೇಶಗಳನ್ನು ಹೊರಡಿಸಲು ಹರ್ಷಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 21 ಎಸ್‌ಆರ್‌ಪಿ 2024**

**ಬೆಂಗಳೂರು, ದಿನಾಂಕ: 23ನೇ ಆಗಸ್ಟ್ 2023**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ★ ಬೆಂಗಳೂರು ★

**1. ಪರಿಷ್ಕೃತ ವೇತನ ಶ್ರೇಣಿಗಳು:**

**1.1** ಇಲಾಖೆಗಳಲ್ಲಿನ ವಿವಿಧ ವೃಂದದ ಹುದ್ದೆಗಳಿಗೆ ಅನ್ವಯವಾಗುವ ಪ್ರಸಕ್ತ ವೇತನ ಶ್ರೇಣಿಗಳನ್ನು ಈ ಕೆಳಗೆ ಸೂಚಿಸಿರುವಂತೆ ಪರಿಷ್ಕರಿಸತಕ್ಕದ್ದು.

| ಕ್ರಮ ಸಂಖ್ಯೆ | ಪ್ರಸ್ತುತ ವೇತನ ಶ್ರೇಣಿ ರೂ. | ಪರಿಷ್ಕೃತ ವೇತನ ಶ್ರೇಣಿಗಳು ರೂ. |
|---|---|---|
| (1) | (2) | (3) |
| 1 | 17000-400-18600-450-20400-500-22400-550-24600-600-27000-650-28950 | 27000-650-29600-725-32500-800-35700-900-39300-1000-43300-1125-46675 |

| | | |
|---|---|---|
| 2 | 18600-450-20400-500-22400-550-24600-600-27000-650-29600-750-32600 | 29600-725-32500-800-35700-900-39300-1000-43300-1125-47800-1250-52800 |
| 3 | 19950-450-20400-500-22400-550-24600-600-27000-650-29600-750-32600-850-36000-950-37900 | 31775-725-32500-800-35700-900-39300-1000-43300-1125-47800-1250-52800-1375-58300-1500-61300 |
| 4 | 21400-500-22400-550-24600-600-27000-650-29600-750-32600-850-36000-950-39800-1100-42000 | 34100-800-35700-900-39300-1000-43300-1125-47800-1250-52800-1375-58300-1500-64300-1650-67600 |
| 5 | 23500-550-24600-600-27000-650-29600-750-32600-850-36000-950-39800-1100-46400-1250-47650 | 37500-900-39300-1000-43300-1125-47800-1250-52800-1375-58300-1500-64300-1650-74200-1900-76100 |
| 6 | 25800-600-27000-650-29600-750-32600-850-36000-950-39800-1100-46400-1250-51400 | 41300-1000-43300-1125-47800-1250-52800-1375-58300-1500-64300-1650-74200-1900-81800 |
| 7 | 27650-650-29600-750-32600-850-36000-950-39800-1100-46400-1250-52650 | 44425-1125-47800-1250-52800-1375-58300-1500-64300-1650-74200-1900-83700 |
| 8 | 30350-750-32600-850-36000-950-39800-1100-46400-1250-53900-1450-58250 | 49050-1250-52800-1375-58300-1500-64300-1650-74200-1900-85600-2300-92500 |
| 9 | 33450-850-36000-950-39800-1100-46400-1250-53900-1450-62600 | 54175-1375-58300-1500-64300-1650-74200-1900-85600-2300-99400 |



AnyScanner

| | | |
|---|---|---|
| 10 | 36000-950-39800-1100-46400-1250-53900-1450-62600-1650-67550 | 58300-1500-64300-1650-74200-1900-85600-2300-99400-2700-107500 |
| 11 | 37900-950-39800-1100-46400-1250-53900-1450-62600-1650-70850 | 61300-1500-64300-1650-74200-1900-85600-2300-99400-2700-112900 |
| 12 | 40900-1100-46400-1250-53900-1450-62600-1650-72500-1900-78200 | 65950-1650-74200-1900-85600-2300-99400-2700-115600-3100-124900 |
| 13 | 43100-1100-46400-1250-53900-1450-62600-1650-72500-1900-83900 | 69250-1650-74200-1900-85600-2300-99400-2700-115600-3100-134200 |
| 14 | 45300-1100-46400-1250-53900-1450-62600-1650-72500-1900-83900-2200-88300 | 72550-1650-74200-1900-85600-2300-99400-2700-115600-3100-134200-3500-141200 |
| 15 | 48900-1250-53900-1450-62600-1650-72500-1900-83900-2200-92700 | 78000-1900-85600-2300-99400-2700-115600-3100-134200-3500-148200 |
| 16 | 52650-1250-53900-1450-62600-1650-72500-1900-83900-2200-97100 | 83700-1900-85600-2300-99400-2700-115600-3100-134200-3500-155200 |
| 17 | 56800-1450-62600-1650-72500-1900-83900-2200-97100-2500-99600 | 90200-2300-99400-2700-115600-3100-134200-3500-155200-4000-159200 |
| 18 | 61150-1450-62600-1650-72500-1900-83900-2200-97100-2500-102100 | 97100-2300-99400-2700-115600-3100-134200-3500-155200-4000-163200 |



AnyScanner

| | | |
|---|---|---|
| 19 | 67550-1650-72500-1900-83900-2200-97100-2500-104600 | 107500-2700-115600-3100-134200-3500-155200-4000-167200 |
| 20 | 70850-1650-72500-1900-83900-2200-97100-2500-107100 | 112900-2700-115600-3100-134200-3500-155200-4000-171200 |
| 21 | 74400-1900-83900-2200-97100-2500-109600 | 118700-3100-134200-3500-155200-4000-175200 |
| 22 | 82000-1900-83900-2200-97100-2500-112100-2800-117700 | 131100-3100-134200-3500-155200-4000-179200-4500-188200 |
| 23 | 90500-2200-97100-2500-112100-2800-123300 | 144700-3500-155200-4000-179200-4500-197200 |
| 24 | 97100-2500-112100-2800-128900-3100-141300 | 155200-4000-179200-4500-206200-5000-226200 |
| 25 | 104600-2500-112100-2800-128900-3100-150600 | 167200-4000-179200-4500-206200-5000-241200 |

**1.2** ಔದ್ಯಮಿಕ ಕೆಲಸಗಾರರ ಅಖಿಲ ಭಾರತ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕ (ಸಾಮಾನ್ಯ) 361.704 (ಆಧಾರ ವರ್ಷ 2001=100) ಅಂಶಗಳ ಸೂಚ್ಯಂಕ ಸರಾಸರಿಯಿಂದ ನಿರೂಪಿಸಲಾದ ದಿನಾಂಕ 01.07.2022ರ ಜೀವನ ಪರಿಸ್ಥಿತಿ ವೆಚ್ಚಕ್ಕೆ ಪರಿಷ್ಕೃತ ವೇತನ ಶ್ರೇಣಿಗಳು ಹೊಂದಿಕೊಂಡಿರುತ್ತವೆ.

**1.3** ಪರಿಷ್ಕೃತ ವೇತನ ಶ್ರೇಣಿಗಳು ಮುಖ್ಯ ವೇತನ ಶ್ರೇಣಿ ರೂ.27000-650-29600-725-32500-800-35700-900-39300-1000-43300-1125-47800-1250-52800-1375-58300-1500-64300-1650-74200-1900-85600-2300-99400-2700-115600-3100-134200-3500-155200-4000-179200-4500-206200-5000-241200ರ ನಿರ್ದಿಷ್ಟ ಭಾಗಗಳಾಗಿವೆ.

**1.4** 1ನೇ ಜುಲೈ 2022ಕ್ಕೆ ಅನ್ವಯಿಸುವಂತೆ ಹುದ್ದೆಗಳಿಗೆ ಅನ್ವಯವಾಗುವ ಪ್ರಸಕ್ತ ವೇತನ ಶ್ರೇಣಿ ಮತ್ತು ಅದಕ್ಕೆ ಸಂವಾದಿ ಸಮಾನಾಂತರ ಪರಿಷ್ಕೃತ ವೇತನ ಶ್ರೇಣಿಗಳು ಮೇಲಿನ ಕಂಡಿಕೆ 1.1 ರ (2) ಮತ್ತು (3)ನೇ ಅಂಕಣಗಳಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

**2. ಜಾರಿಗೆ ಬರುವ ದಿನಾಂಕ:**

**2.1** 2024ರ ಪರಿಷ್ಕೃತ ವೇತನ ಶ್ರೇಣಿಗಳು 1ನೇ ಜುಲೈ 2022ರಿಂದ ಜಾರಿಗೆ ಬರುವಂತೆ ಅನ್ವಯವಾಗುತ್ತವೆ. ಪರಿಷ್ಕೃತ ವೇತನ ಶ್ರೇಣಿಗಳ ಅನುಷ್ಠಾನದ ಕಾರಣದಿಂದ ಉಂಟಾಗುವ ವೇತನ ಮತ್ತು ಪಿಂಚಣಿಯ ಆರ್ಥಿಕ ಲಾಭವು 1ನೇ ಆಗಸ್ಟ್ 2024 ರಿಂದ ಲಭ್ಯವಾಗುತ್ತದೆ.

**2.2** ವೇತನ ಶ್ರೇಣಿಗಳ ಮತ್ತು ಪಿಂಚಣಿಯ ಪರಿಷ್ಕರಣೆಯ ಕಾರಣದಿಂದ ಉಂಟಾಗುವ ವೇತನ ಮತ್ತು ಭತ್ಯೆಗಳು ಹಾಗೂ ಪಿಂಚಣಿಯ ಮೊತ್ತದಲ್ಲಿನ ಹೆಚ್ಚಳವನ್ನು 1ನೇ ಆಗಸ್ಟ್ 2024 ರಿಂದ ನಗದಾಗಿ ಸಂದಾಯ ಮಾಡತಕ್ಕದ್ದು.

**3. ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿ:**

**3.1** ಸರ್ಕಾರಿ ನೌಕರನ ಪ್ರಸಕ್ತ ವೇತನವನ್ನು ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಈ ಕೆಳಕಂಡ ವಿಧಾನದಲ್ಲಿ ನಿಗದಿಪಡಿಸತಕ್ಕದ್ದು:-

i. ದಿನಾಂಕ: 01.07.2022 ರಲ್ಲಿದ್ದಂತೆ ಮೂಲ ವೇತನ.

ii. ದಿನಾಂಕ: 01.07.2022 ರಲ್ಲಿದ್ದಂತಹ ಬೆಲೆ ಸೂಚ್ಯಂಕ ಹಂತ 361.704 ಕ್ಕೆ ಸಂವಾದಿಯಾಗಿ ಲಭ್ಯವಿದ್ದ 31% ತುಟ್ಟಿ ಭತ್ಯೆ.

iii. ದಿನಾಂಕ: 01.07.2022 ರಲ್ಲಿ ಲಭ್ಯವಿದ್ದ ಮೂಲ ವೇತನದ ಮೇಲೆ 27.50% ರಷ್ಟು ಫಿಟ್‌ಮೆಂಟ್ ಸೌಲಭ್ಯ.

iv. ಈ ಮೇಲಿನ (i), (ii), (iii) ರಲ್ಲಿ ನಮೂದಿಸಿರುವ ಉಪಲಬ್ಧಿಗಳನ್ನು ಒಟ್ಟುಗೂಡಿಸಿ ಲೆಕ್ಕ ಹಾಕಿದಾಗ ಬರುವ ಮೊತ್ತವನ್ನು ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಈ ಕೆಳಗಿನಂತೆ ನಿಗದಿಪಡಿಸತಕ್ಕದ್ದು:

<u>ಅಥವಾ</u>

ಪರ್ಯಾಯವಾಗಿ, ದಿನಾಂಕ 01.07.2022 ರಂದು ಲಭ್ಯವಿರುವ ಸರ್ಕಾರಿ ನೌಕರನ ಪ್ರಸಕ್ತ ಮೂಲವೇತನವನ್ನು 1.585 ಗುಣಾಕಾರಾಂಶದಿಂದ ಗುಣಿಸಿ ಪರಿಷ್ಕೃತ ವೇತನ ಶ್ರೇಣಿಯ ಸಂವಾದಿ ಹಂತಕ್ಕೆ ನಿಗದಿಪಡಿಸಬಹುದಾಗಿರುತ್ತದೆ. ಈ ರೀತಿ ಬಂದ ಮೊತ್ತವನ್ನು ರೂಪಾಯಿಯ ಪೂರ್ಣಾಂಕಕ್ಕೆ ಸೀಮಿತಗೊಳಿಸಿ ದಶಾಂಶಗಳನ್ನು ಕಡೆಗಣಿಸತಕ್ಕದ್ದು. ಈ



AnyScanner

ರೀತಿ ಬಂದ ಮೊತ್ತವು ನೌಕರನ ಪರಿಷ್ಕೃತ ವೇತನವಾಗಿರುತ್ತದೆ ಮತ್ತು ಅದನ್ನು ಈ ಕೆಳಕಂಡಂತೆ ಕ್ರಮಬದ್ಧಗೊಳಿಸತಕ್ಕದ್ದು.

(ಎ) ಈ ರೀತಿ ಮೇಲಿನಂತೆ ಲೆಕ್ಕ ಹಾಕಲಾದ ಒಟ್ಟು ಮೊತ್ತವು ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠಕ್ಕಿಂತಲೂ ಕಡಿಮೆಯಿದ್ದಲ್ಲಿ, ಅದನ್ನು ಕನಿಷ್ಟಕ್ಕೆ ನಿಗದಿಪಡಿಸತಕ್ಕದ್ದು.

(ಬಿ) ಈ ಮೇಲಿನಂತೆ ಲೆಕ್ಕ ಹಾಕಲಾದ ಮೊತ್ತವು ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಹಂತ ಅಥವಾ ಕನಿಷ್ಠಕ್ಕಿಂತ ಮೇಲ್ಪಟ್ಟ ಯಾವುದೇ ಹಂತಕ್ಕೆ ಸರಿಸಮನಾಗಿದ್ದಲ್ಲಿ, ಅದನ್ನು ಅಂತಹ ಸರಿಸಮಾನಾದ ಹಂತಕ್ಕೆ ನಿಗದಿಪಡಿಸತಕ್ಕದ್ದು.

(ಸಿ) ಈ ಮೇಲಿನಂತೆ ಲೆಕ್ಕ ಹಾಕಲಾದ ಮೊತ್ತವು ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಟದ ಹಂತಕ್ಕಿಂತ ಹೆಚ್ಚಾಗಿದ್ದು, ಗರಿಷ್ಟದ ಹಂತಕ್ಕಿಂತ ಕಡಿಮೆಯಿದ್ದಲ್ಲಿ ಅದನ್ನು ಪರಿಷ್ಕೃತ ವೇತನ ಶ್ರೇಣಿಯ ನಂತರದ ಮೇಲಿನ ಹಂತಕ್ಕೆ ನಿಗದಿಪಡಿಸತಕ್ಕದ್ದು.

(ಡಿ) ಈ ಮೇಲಿನಂತೆ ಲೆಕ್ಕ ಹಾಕಲಾದ ಮೊತ್ತವು ಪರಿಷ್ಕೃತ ವೇತನ ಶ್ರೇಣಿಯ ಗರಿಷ್ಟ ಹಂತಕ್ಕೆ ಸಮನಾಗಿದ್ದಲ್ಲಿ, ಅದನ್ನು ಗರಿಷ್ಠ ಹಂತಕ್ಕೆ ನಿಗದಿಪಡಿಸತಕ್ಕದ್ದು.

ಮತ್ತು

(ಇ) ಈ ಮೇಲಿನಂತೆ ಲೆಕ್ಕ ಹಾಕಲಾದ ಮೊತ್ತವು ಪರಿಷ್ಕೃತ ವೇತನ ಶ್ರೇಣಿಯ ಗರಿಷ್ಠ ಹಂತಕ್ಕಿಂತಲೂ ಹೆಚ್ಚಾಗಿದ್ದು, ನಂತರದ ಹಂತಕ್ಕಿಂತಲೂ ಕಡಿಮೆಯಿದ್ದಲ್ಲಿ, ಅದನ್ನು ನಂತರದ ಹಂತಕ್ಕೆ ನಿಗದಿಪಡಿಸತಕ್ಕದ್ದು.

**ಟಿಪ್ಪಣಿ:**

(ಎ) ಈ ಉದ್ದೇಶಕ್ಕಾಗಿ 'ಪ್ರಸ್ತುತ ಉಪಲಬ್ಧವು' 2024ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 3ರ ಖಂಡ (ಎ)ಯಲ್ಲಿ ವ್ಯಾಖ್ಯಾನಿಸಿದ 'ಮೂಲ ವೇತನ' ಮತ್ತು ಮೇಲಿನ ಕಂಡಿಕೆ 3.1 ರಲ್ಲಿ ನಮೂದಿಸಿರುವ ತುಟ್ಟಿಭತ್ಯೆಯನ್ನು ಒಳಗೊಳ್ಳುತ್ತದೆ.

(ಬಿ) ಈ ಮೇಲಿನಂತೆ ವೇತನ ನಿಗದಿಯ ಉದ್ದೇಶಕ್ಕಾಗಿ; ವೇತನ ಶ್ರೇಣಿಯ ಹಂತ ಎಂದರೆ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024ರ 4ನೇ ಅನುಸೂಚಿಯಲ್ಲಿ ನಮೂದಿಸಿರುವ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿಯ ಹಂತ ಮತ್ತು ಪರಿಷ್ಕೃತ ವೇತನ ಶ್ರೇಣಿಯ ಗರಿಷ್ಟಕ್ಕಿಂತ ಮೇಲ್ಪಟ್ಟ ಹಂತದ ವ್ಯತ್ಯಾಸದ ಮೊತ್ತವನ್ನು ವೈಯಕ್ತಿಕ ವೇತನವೆಂದು ಪರಿಗಣಿಸತಕ್ಕದ್ದು.



AnyScanner

3.2 ಪ್ರಸಕ್ತ ವೇತನ ಶ್ರೇಣಿ ಮತ್ತು ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಹಂತಗಳು ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024ರ ಅನುಬಂಧ-4ರಲ್ಲಿ ನಮೂದಿಸಿರುವ ಹೊಂದಿಕೆ ಕೋಷ್ಟಕದಲ್ಲಿ (fitment table) ನಿರ್ದಿಷ್ಟಪಡಿಸಿದಂತೆ ಇರುತ್ತದೆ.

3.3 ಈ ಮೇಲಿನ ನಿಯಮಗಳನ್ವಯ ಸರ್ಕಾರಿ ನೌಕರನಿಗೆ ಅನ್ವಯವಾಗುವ ಪರಿಷ್ಕೃತ ಶ್ರೇಣಿಯಲ್ಲಿ ವೇತನವನ್ನು ಪಡೆಯಲು ಅವನು ಅಭಿಮತವನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ. 1ನೇ ಜುಲೈ 2022 ರಂದು ಸೇವೆಯಲ್ಲಿದ್ದಂಥ ಪ್ರತಿಯೊಬ್ಬ ಸರ್ಕಾರಿ ನೌಕರನ ಪ್ರಸಕ್ತ ವೇತನವನ್ನು ಸದರಿ ನಿಯಮಗಳ ನಾಲ್ಕನೇ ಅನುಸೂಚಿಯ 1ನೇ ಅಂಕಣದಲ್ಲಿ ನಮೂದಿಸಿರುವ ಪ್ರಸಕ್ತ ವೇತನ ಶ್ರೇಣಿಯಲ್ಲಿನ ಮೂಲ ವೇತನಕ್ಕೆ ಸಂವಾದಿಯಾಗಿ ಅದರ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಹಂತದಲ್ಲಿ ಆತನ ವೇತನವನ್ನು ನಿಗದಿಪಡಿಸತಕ್ಕದ್ದು.

3.4 2ನೇ ಜುಲೈ 2022 ರಿಂದ 30ನೇ ಜೂನ್ 2023ರ ವರೆಗಿನ ಅವಧಿಯಲ್ಲಿ ಸರ್ಕಾರಿ ನೌಕರನಿಗೆ ಸ್ಥಗಿತ ವೇತನ ಬಡ್ತಿಯನ್ನೂ ಒಳಗೊಂಡಂತೆ ವೇತನ ಬಡ್ತಿಯು ಸಾಮಾನ್ಯ ಕ್ರಮದಲ್ಲಿ ಪ್ರಸಕ್ತ ವೇತನ ಶ್ರೇಣಿಯಲ್ಲಿ ಪ್ರಾಪ್ತವಾಗುತ್ತಿದ್ದು ಅದು ಆತನಿಗೆ ಅನುಕೂಲವಾಗುವಂತಿದ್ದರೆ, ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಆತನ ವೇತನವನ್ನು ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024ರ ನಿಯಮ 8 ರ ಉಪ-ನಿಯಮ (1)ರ ಪರಂತುಕದ ಉಪಬಂಧಗಳಿಗನುಸಾರವಾಗಿ, ಅಂಥ ವೇತನ ಬಡ್ತಿಯು ಪ್ರಾಪ್ತವಾಗುವ ದಿನಾಂಕದಿಂದ ಪುನರ್ ನಿಗದಿಪಡಿಸತಕ್ಕದ್ದು.

3.5 1ನೇ ಜುಲೈ 2022 ರಂದು ಅಥವಾ ನಂತರದಲ್ಲಿ ಸೇವೆಗೆ ಸೇರಿರುವ ಅಥವಾ 1ನೇ ಜುಲೈ 2022 ಕ್ಕೆ ಮೊದಲು ತಾನು ಧಾರಣ ಮಾಡಿರುವ ಹುದ್ದೆಯಲ್ಲದೆ ಇತರ ಯಾವುದೇ ಹುದ್ದೆಗೆ 1ನೇ ಜುಲೈ 2022ರ ನಂತರದಲ್ಲಿ ಮುಂಬಡ್ತಿ ಹೊಂದಿರುವ ಅಥವಾ ನೇಮಕ ಹೊಂದಿರುವ ಸರ್ಕಾರಿ ನೌಕರನ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಪಬಂಧಗಳಿಗನುಸಾರವಾಗಿ ನಿಗದಿಪಡಿಸತಕ್ಕದ್ದು. ಇಂತಹ ನಿರ್ದಿಷ್ಟ ಪ್ರಕರಣಗಳಿಗೆ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024ರ ನಿಯಮ ಮತ್ತು ಈ ಆದೇಶಗಳ ವೇತನ ನಿಗದೀಕರಣದ ಅವಕಾಶಗಳು ಅನ್ವಯವಾಗುವುದಿಲ್ಲ.

3.6 ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದೀಕರಣದ ಕೆಲವು ಕಾಲ್ಪನಿಕ ಉದಾಹರಣೆಗಳನ್ನು ಈ ಆದೇಶದ ಅನುಬಂಧ-I ರಲ್ಲಿ ನೀಡಲಾಗಿದೆ.



AnyScanner

**4. ಪರಿಷ್ಕೃತ ಶ್ರೇಣಿಗಳಲ್ಲಿ ವೇತನ ಪಡೆಯಲು ಅಧಿಕಾರ ನೀಡಿಕೆ:**

**4.1** ಕಛೇರಿಗಳ ಮುಖ್ಯಾಧಿಕಾರಿಗಳು ತಮ್ಮ ನಿಯಂತ್ರಣದಲ್ಲಿರುವ ಸರ್ಕಾರಿ ನೌಕರರ ವೇತನವನ್ನು ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024 ಮತ್ತು ಈ ಆದೇಶಗಳ ಅನ್ವಯಿಸುವ ಅವಕಾಶಗಳಡಿ 'ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಹೊಂದಿಕೆ ಕೋಷ್ಟಕ' ದಲ್ಲಿನ ಸಮಾನಾಂತರ ಹಂತಕ್ಕೆ ನಿಗದಿಪಡಿಸಲು ಅಧಿಕಾರ ಹೊಂದಿರುತ್ತಾರೆ.

**4.2** ಮಹಾಲೇಖಪಾಲರಿಂದ ವೇತನ ಅಧಿಕೃತಗೊಳಿಸಲ್ಪಡುವ ಸರ್ಕಾರಿ ನೌಕರರ ಪ್ರಕರಣಗಳಲ್ಲಿ, ಅವರ ವೇತನವನ್ನು ಮಹಾಲೇಖಪಾಲರು ಈ ಮೇಲಿನ ಕಂಡಿಕೆ 4.1ರ ಅವಕಾಶಗಳನ್ವಯ ನಿಗದಿಪಡಿಸತಕ್ಕದ್ದು.

**4.3** ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದೀಕರಣ ಮಾಡಿರುವ ಬಗ್ಗೆ ಸಂಬಂಧಿಸಿದ ನೌಕರನ ಮೂಲ ಸೇವಾ ಪುಸ್ತಕ ಮತ್ತು ವಿದ್ಯುನ್ಮಾನ ಸೇವಾ ವಹಿಯಲ್ಲಿ (ESR) ಸೂಕ್ತ ರೀತಿಯಲ್ಲಿ ನಮೂದುಗಳನ್ನು ಮಾಡತಕ್ಕದ್ದು. ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದೀಕರಣವನ್ನು ಈ ಆದೇಶದ ಅನುಬಂಧ-II ರಲ್ಲಿ ನೀಡಲಾಗಿರುವ ನಮೂನೆಯಲ್ಲಿರುವಂತೆ ಮಾಡತಕ್ಕದ್ದು. ನಮೂನೆಯ ಒಂದು ಪ್ರತಿಯನ್ನು ಸರ್ಕಾರಿ ನೌಕರನ ಸೇವಾ ಪುಸ್ತಕದಲ್ಲಿ ಅಂಟಿಸುವುದು ಹಾಗೂ ವಿದ್ಯುನ್ಮಾನ ಸೇವಾ ವಹಿಗೆ ಲಗತ್ತಿಸುವುದು. ಒಂದು ಪ್ರತಿಯನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪ್ರಥಮ ಬಾರಿಗೆ ವೇತನವನ್ನು ಪಡೆಯುವ ಸರ್ಕಾರಿ ನೌಕರನ ಸಂಬಳದ ಬಿಲ್ಲಿಗೆ ಲಗತ್ತಿಸುವುದು ಮತ್ತು ಒಂದು ಪ್ರತಿಯನ್ನು ಸಂಬಂಧಪಟ್ಟ ಇಲಾಖಾ ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.

**4.4** ಕಛೇರಿ ಮುಖ್ಯಸ್ಥರು ಅವರ ಅಧೀನಕ್ಕೊಳಪಡುವ ಸರ್ಕಾರಿ ನೌಕರರ ವೇತನವನ್ನು 30ನೇ ನವೆಂಬರ್ 2024 ರೊಳಗಾಗಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ತಪ್ಪದೇ ನಿಗದಿಪಡಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**5. ತುಟ್ಟಿ ಭತ್ಯೆ:**

**5.1** ಅಖಿಲ ಭಾರತ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕ (ಸಾಮಾನ್ಯ) 361.704 ಅಂಶಗಳವರೆಗಿನ (ಆಧಾರ ವರ್ಷ 2001=100) ತುಟ್ಟಿ ಭತ್ಯೆಯನ್ನು ದಿನಾಂಕ: 1ನೇ ಜುಲೈ 2022 ರಂದು ಲಭ್ಯವಿದ್ದ ಸರ್ಕಾರಿ ನೌಕರನ ಪ್ರಸ್ತುತ ಮೂಲ ವೇತನದೊಂದಿಗೆ ವಿಲೀನಗೊಳಿಸಿ ಪರಿಷ್ಕೃತ ವೇತನ ಶ್ರೇಣಿಗಳನ್ನು ರಚಿಸಲಾಗಿರುತ್ತದೆ. ಆದುದರಿಂದ, ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಮೊದಲನೇ ಕಂತಿನ ತುಟ್ಟಿ ಭತ್ಯೆಯು ದಿನಾಂಕ: 1ನೇ ಜನವರಿ 2023 ರಂದು ಪ್ರಾಪ್ತವಾಗತಕ್ಕದ್ದು.

**5.2** ಸರ್ಕಾರಿ ನೌಕರರಿಗೆ ನೀಡಲಾಗುವ ತುಟ್ಟಿ ಭತ್ಯೆಯನ್ನು ಭಾರತ ಸರ್ಕಾರದ ತುಟ್ಟಿ ಭತ್ಯೆಯ ಸೂತ್ರಕ್ಕೆ ಅನುಸಾರವಾಗಿ ಕ್ರಮಬದ್ಧಗೊಳಿಸತಕ್ಕದ್ದಾಗಿರುತ್ತದೆ.

**5.3** ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆಯನ್ನು ಕೇಂದ್ರ ಸರ್ಕಾರವು ದಿನಾಂಕ 01.01.2023 ರಿಂದ ಅನ್ವಯವಾಗುವಂತೆ ಮಂಜೂರು ಮಾಡುವ ತುಟ್ಟಿಭತ್ಯೆಯ ಪ್ರತಿ ಶೇಕಡಾ 1 ಕ್ಕೆ 0.722 ಗುಣಾಕಾರಾಂಶವನ್ನು (multiplication factor) ಅನ್ವಯಿಸಿ ಲೆಕ್ಕಹಾಕಿ ಪಾವತಿಸತಕ್ಕದ್ದು. ಅದರಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ತುಟ್ಟಿಭತ್ಯೆಯನ್ನು ಕಾಲ್ಪನಿಕವಾಗಿ ಈ ಕೆಳಕಂಡಂತೆ ಕ್ರಮಬದ್ಧಗೊಳಿಸತಕ್ಕದ್ದು:

| | | |
|---|---|---|
| 01.07.2022 | - | ಶೂನ್ಯ |
| 01.01.2023 | - | ಪರಿಷ್ಕೃತ ಮೂಲ ವೇತನದ 2.75% |
| 01.07.2023 | - | ಪರಿಷ್ಕೃತ ಮೂಲ ವೇತನದ 5.5% |
| 01.01.2024 | - | ಪರಿಷ್ಕೃತ ಮೂಲ ವೇತನದ 8.5% |

**5.4** ಮುಂದಿನ ತುಟ್ಟಿಭತ್ಯೆಯ ಮಂಜೂರಾತಿಯು ಈ ಸಂಬಂಧ ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳಲ್ಲಿ ಕ್ರಮಬದ್ಧಗೊಳಿಸಿದಂತೆ ಇರತಕ್ಕದ್ದು.

**5.5** ತುಟ್ಟಿಭತ್ಯೆಯನ್ನು 1ನೇ ಜನವರಿ ಮತ್ತು 1ನೇ ಜುಲೈ ರಿಂದ ಅನ್ವಯಿಸುವಂತೆ ವರ್ಷಕ್ಕೆ ಎರಡು ಬಾರಿ ಪಾವತಿಸತಕ್ಕದ್ದು.

**5.6** ಹಣದುಬ್ಬರದ ತಟಸ್ಥೀಕರಣವು ಎಲ್ಲಾ ಹಂತಗಳಲ್ಲಿ ಶೇ.100ರಷ್ಟು ಏಕರೂಪವಾಗಿರತಕ್ಕದ್ದು.

**5.7** ತುಟ್ಟಿ ಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸುವುದನ್ನು ಮುಂದುವರಿಸಲಾಗುವುದು ಮತ್ತು ಅದನ್ನು ಯಾವುದೇ ಉದ್ದೇಶಕ್ಕೆ ವೇತನ ಎಂದು ಪರಿಗಣಿಸಲಾಗುವುದಿಲ್ಲ.

**6. ಕಾಲಬದ್ಧ ಮುಂಬಡ್ತಿ / ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ/ ಆಯ್ಕೆ ದರ್ಜೆ ವೇತನ ಶ್ರೇಣಿ:**

**6.1** ಕಾಲಬದ್ಧ ಮುಂಬಡ್ತಿ/ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ/ಆಯ್ಕೆ ದರ್ಜೆ ವೇತನ ಶ್ರೇಣಿ ಮುಂಬಡ್ತಿಗಳ ಚಾಲ್ತಿಯಲ್ಲಿನ ಯೋಜನೆಗಳು ಮುಂದಿನ ಆದೇಶಗಳವರೆಗೆ ಮುಂದುವರಿಯುತ್ತವೆ.



AnyScanner

6.2 ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನ ಪ್ರಕರಣಗಳಲ್ಲಿ 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ, ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983 ಮತ್ತು ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿ) ನಿಯಮಗಳು, 1991ರ 'ಆಯ್ಕೆ ಕಾಲಿಕ ವೇತನ ಶ್ರೇಣಿ' ಮತ್ತು 'ಹಿರಿಯ ವೇತನ ಶ್ರೇಣಿ' ಗಳು ಅನುಕ್ರಮವಾಗಿ 'ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ' ಮತ್ತು 'ಪರಿಷ್ಕೃತ ಹಿರಿಯ ವೇತನ ಶ್ರೇಣಿ' ಆಗಿರುತ್ತವೆ.

6.3 ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರನ ಪ್ರಕರಣಗಳಲ್ಲಿ ಪರಿಷ್ಕೃತ ಹಿರಿಯ ವೇತನ ಶ್ರೇಣಿಯು, ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983ರಡಿ ಮಂಜೂರು ಮಾಡಲಾದ 'ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ'ಯ ನಂತರದ ಮೇಲಿನ ಪರಿಷ್ಕೃತ ಶ್ರೇಣಿಯಾಗಿರತಕ್ಕದ್ದು ಅಥವಾ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಯ ಆಯ್ಕೆ ಕಾಲಿಕ ಶ್ರೇಣಿಯು ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983ರನ್ವಯ ಮಂಜೂರು ಮಾಡಲಾದ 'ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ' ಮತ್ತು ಪದೋನ್ನತಿ ಹುದ್ದೆಯ ಪರಿಷ್ಕೃತ ಶ್ರೇಣಿ ಒಂದೇ ಆಗಿದ್ದಲ್ಲಿ, ಆ ಪದೋನ್ನತಿ ಹುದ್ದೆಯ 'ಪರಿಷ್ಕೃತ ಶ್ರೇಣಿ' ಆಗಿರತಕ್ಕದ್ದು.

6.4 ಆಯಾ ಪ್ರಕರಣಕ್ಕನುಸಾರವಾಗಿ ಅನ್ವಯಿಸುವ 'ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ/ ಹಿರಿಯ ವೇತನ ಶ್ರೇಣಿ' ಗಳು ಈ ಕೆಳಗಿನ ಕೋಷ್ಟಕದ ಅಂಕಣ(2)ರಲ್ಲಿನ ಪರಿಷ್ಕೃತ ವೇತನ ಶ್ರೇಣಿಗೆ ಸಂವಾದಿಯಾಗಿ ಅಂಕಣ (3)ರಲ್ಲಿ ನಮೂದಿಸಿರುವಂತೆ ಇರುತ್ತದೆ.

| ಕ್ರಮ ಸಂಖ್ಯೆ | ವೇತನ ಶ್ರೇಣಿ ರೂ. | ಆಯ್ಕೆ ಕಾಲಿಕ ವೇತನ ಶ್ರೇಣಿ ರೂ. |
|---|---|---|
| (1) | (2) | (3) |
| 1 | 27000-650-29600-725-32500-800-35700-900-39300-1000-43300-1125-46675 | 29600-725-32500-800-35700-900-39300-1000-43300-1125-47800-1250-52800 |
| 2 | 29600-725-32500-800-35700-900-39300-1000-43300-1125-47800-1250-52800 | 31775-725-32500-800-35700-900-39300-1000-43300-1125-47800-1250-52800-1375-58300-1500-61300 |

| | | |
|---|---|---|
| 3 | 31775-725-32500-800-35700-900-39300-1000-43300-1125-47800-1250-52800-1375-58300-1500-61300 | 34100-800-35700-900-39300-1000-43300-1125-47800-1250-52800-1375-58300-1500-64300-1650-67600 |
| 4 | 34100-800-35700-900-39300-1000-43300-1125-47800-1250-52800-1375-58300-1500-64300-1650-67600 | 37500-900-39300-1000-43300-1125-47800-1250-52800-1375-58300-1500-64300-1650-74200-1900-76100 |
| 5 | 37500-900-39300-1000-43300-1125-47800-1250-52800-1375-58300-1500-64300-1650-74200-1900-76100 | 41300-1000-43300-1125-47800-1250-52800-1375-58300-1500-64300-1650-74200-1900-81800 |
| 6 | 41300-1000-43300-1125-47800-1250-52800-1375-58300-1500-64300-1650-74200-1900-81800 | 44425-1125-47800-1250-52800-1375-58300-1500-64300-1650-74200-1900-83700 |
| 7 | 44425-1125-47800-1250-52800-1375-58300-1500-64300-1650-74200-1900-83700 | 49050-1250-52800-1375-58300-1500-64300-1650-74200-1900-85600-2300-92500 |
| 8 | 49050-1250-52800-1375-58300-1500-64300-1650-74200-1900-85600-2300-92500 | 54175-1375-58300-1500-64300-1650-74200-1900-85600-2300-99400 |
| 9 | 54175-1375-58300-1500-64300-1650-74200-1900-85600-2300-99400 | 58300-1500-64300-1650-74200-1900-85600-2300-99400-2700-107500 |
| 10 | 58300-1500-64300-1650-74200-1900-85600-2300-99400-2700-107500 | 61300-1500-64300-1650-74200-1900-85600-2300-99400-2700-112900 |

| | | |
|---|---|---|
| 11 | 61300-1500-64300-1650-74200-1900-85600-2300-99400-2700-112900 | 65950-1650-74200-1900-85600-2300-99400-2700-115600-3100-124900 |
| 12 | 65950-1650-74200-1900-85600-2300-99400-2700-115600-3100-124900 | 69250-1650-74200-1900-85600-2300-99400-2700-115600-3100-134200 |
| 13 | 69250-1650-74200-1900-85600-2300-99400-2700-115600-3100-134200 | 72550-1650-74200-1900-85600-2300-99400-2700-115600-3100-134200-3500-141200 |
| 14 | 72550-1650-74200-1900-85600-2300-99400-2700-115600-3100-134200-3500-141200 | 78000-1900-85600-2300-99400-2700-115600-3100-134200-3500-148200 |
| 15 | 78000-1900-85600-2300-99400-2700-115600-3100-134200-3500-148200 | 83700-1900-85600-2300-99400-2700-115600-3100-134200-3500-155200 |
| 16 | 83700-1900-85600-2300-99400-2700-115600-3100-134200-3500-155200 | 90200-2300-99400-2700-115600-3100-134200-3500-155200-4000-159200 |
| 17 | 90200-2300-99400-2700-115600-3100-134200-3500-155200-4000-159200 | 97100-2300-99400-2700-115600-3100-134200-3500-155200-4000-163200 |
| 18 | 97100-2300-99400-2700-115600-3100-134200-3500-155200-4000-163200 | 107500-2700-115600-3100-134200-3500-155200-4000-167200 |

**6.5** ಸೂಕ್ತ ಆದೇಶಗಳನ್ವಯ ರಾಜ್ಯ ಸರ್ಕಾರದ ನಿರ್ದಿಷ್ಟ ಗ್ರೂಪ್-ಎ ಹುದ್ದೆಗಳಿಗೆ ಮಂಜೂರು ಮಾಡಲಾಗಿರುವ ಆಯ್ಕೆ ದರ್ಜೆ ವೇತನ ಶ್ರೇಣಿ ಯೋಜನೆಯು ಮುಂದಿನ ಆದೇಶದವರೆಗೆ ಮುಂದುವರೆದು ಅನ್ವಯಿಸತಕ್ಕದ್ದು.



AnyScanner

6.6 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಸರ್ಕಾರಿ ನೌಕರನು ಧಾರಣೆ ಮಾಡಿರುವ ಹುದ್ದೆಗೆ ಲಭ್ಯವಿರುವ 'ಆಯ್ಕೆ ದರ್ಜೆ ವೇತನ ಶ್ರೇಣಿ' ಯು ಈ ಕೆಳಗಿನ ಅಂಕಣ (2)ರಲ್ಲಿ ನಮೂದಿಸಿರುವ ಪರಿಷ್ಕೃತ ವೇತನ ಶ್ರೇಣಿಗೆ ಸಂವಾದಿಯಾಗಿ ಅಂಕಣ (3)ರಲ್ಲಿ ನಮೂದಿಸಿರುವ 'ಪರಿಷ್ಕೃತ ಆಯ್ಕೆ ದರ್ಜೆ ವೇತನ ಶ್ರೇಣಿ' ಆಗಿರತಕ್ಕದ್ದು:-

| ಕ್ರಮ ಸಂಖ್ಯೆ | ವೇತನ ಶ್ರೇಣಿ ರೂ. | ಆಯ್ಕೆ ದರ್ಜೆ ವೇತನ ಶ್ರೇಣಿ ರೂ. |
|---|---|---|
| (1) | (2) | (3) |
| 1 | 107500-2700-115600-3100-134200-3500-155200-4000-167200 | 112900-2700-115600-3100-134200-3500-155200-4000-171200 |
| 2 | 112900-2700-115600-3100-134200-3500-155200-4000-171200 | 118700-3100-134200-3500-155200-4000-175200 |
| 3 | 118700-3100-134200-3500-155200-4000-175200 | 131100-3100-134200-3500-155200-4000-179200-4500-188200 |
| 4 | 131100-3100-134200-3500-155200-4000-179200-4500-188200 | 144700-3500-155200-4000-179200-4500-197200 |
| 5 | 144700-3500-155200-4000-179200-4500-197200 | 155200-4000-179200-4500-206200-5000-226200 |
| 6 | 155200-4000-179200-4500-206200-5000-226200 | 167200-4000-179200-4500-206200-5000-241200 |

6.7 1ನೇ ಜುಲೈ 2022ಕ್ಕೂ ಪೂರ್ವದಲ್ಲಿ ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983 ಮತ್ತು ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿ) ನಿಯಮಗಳು, 1991 ಮತ್ತು ಸಂಬಂಧಿಸಿದ ಆದೇಶಗಳನ್ವಯ 'ಆಯ್ಕೆ ಕಾಲಿಕ ವೇತನ ಶ್ರೇಣಿ' ಅಥವಾ 'ಹಿರಿಯ ವೇತನ ಶ್ರೇಣಿ' ಅಥವಾ 'ಆಯ್ಕೆ ದರ್ಜೆ ವೇತನ ಶ್ರೇಣಿ' ಯನ್ನು ಮಂಜೂರು ಮಾಡಲಾಗಿರುವ ಸರ್ಕಾರಿ ನೌಕರನ ವೇತನವನ್ನು ಮೇಲಿನ ಕಂಡಿಕೆ 3.1 ರಿಂದ 3.4ರಲ್ಲಿ ತಿಳಿಸಿರುವಂತೆ ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸತಕ್ಕದ್ದು.



AnyScanner

6.8 ಕರ್ನಾಟಕ ನಾಗರಿಕ ಸೇವಾ (ಕಾಲಬದ್ಧ ಮುಂಬಡ್ತಿ) ನಿಯಮಗಳು, 1983 ಮತ್ತು ಕರ್ನಾಟಕ ನಾಗರಿಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಮುಂಬಡ್ತಿ) ನಿಯಮಗಳು, 1991 ಮತ್ತು ಸಂಬಂಧಿಸಿದ ಆದೇಶಗಳನ್ವಯ ಆಯಾ ಪ್ರಕರಣಕ್ಕನುಸಾರವಾಗಿ 'ಆಯ್ಕೆ ಕಾಲಿಕ ವೇತನ ಶ್ರೇಣಿ' ಅಥವಾ 'ಹಿರಿಯ ವೇತನ ಶ್ರೇಣಿ' ಅಥವಾ ' ಆಯ್ಕೆ ದರ್ಜೆ ವೇತನ ಶ್ರೇಣಿ' ಗೆ 1ನೇ ಜುಲೈ 2022 ಅಥವಾ ಆನಂತರ ಅರ್ಹನಾಗುವ ಸರ್ಕಾರಿ ನೌಕರನ ವೇತನವನ್ನು ಅನ್ವಯಿಸುವ ನಿಯಮಗಳಲ್ಲಿನ ಅವಕಾಶಗಳಂತೆ 'ಪರಿಷ್ಕೃತ ಆಯ್ಕೆ ಕಾಲಿಕ ವೇತನ ಶ್ರೇಣಿ' ಅಥವಾ 'ಪರಿಷ್ಕೃತ ಹಿರಿಯ ವೇತನ ಶ್ರೇಣಿ' ಅಥವಾ 'ಪರಿಷ್ಕೃತ ಆಯ್ಕೆ ದರ್ಜೆ ವೇತನ ಶ್ರೇಣಿ'ಯಲ್ಲಿ ಸಂದರ್ಭಾನುಸಾರ ನಿಗದಿಪಡಿಸತಕ್ಕದ್ದು.

## 7. ಮನೆ ಬಾಡಿಗೆ ಭತ್ಯೆ :

7.1 ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕೋಸ್ಕರ ರಾಜ್ಯದಲ್ಲಿನ ನಗರಗಳು ಮತ್ತು ಇತರ ಪ್ರದೇಶಗಳ ಪ್ರಸ್ತುತ ವರ್ಗೀಕರಣವು ಮುಂದಿನ ಆದೇಶದವರೆಗೆ ಮುಂದುವರೆದು ಅನ್ವಯಿಸತಕ್ಕದ್ದು. 1ನೇ ಆಗಸ್ಟ್ 2024 ರಿಂದ ಅನ್ವಯಿಸುವಂತೆ ವಿವಿಧ ವರ್ಗದ ಪ್ರದೇಶಗಳಿಗೆ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಮನೆ ಬಾಡಿಗೆ ಭತ್ಯೆಯ ದರಗಳು ಈ ಕೆಳಗಿನ ಕೋಷ್ಟಕದ ಅಂಕಣ(3)ರಲ್ಲಿ ನಮೂದಿಸಿದಂತೆ ಲಭ್ಯವಿರುತ್ತದೆ:

| ಜನಸಂಖ್ಯೆ | ವರ್ಗೀಕರಣ | ಮನೆ ಬಾಡಿಗೆ ಭತ್ಯೆಯ ದರಗಳು |
|---|---|---|
| (1) | (2) | (3) |
| 25 ಲಕ್ಷ ಮತ್ತು ಅದಕ್ಕೂ ಹೆಚ್ಚು | ಎ | ಮೂಲ ವೇತನದ ಶೇ.20 ರಷ್ಟು |
| 5 ಲಕ್ಷ ಮತ್ತು ಅದಕ್ಕೂ ಹೆಚ್ಚು ಆದರೆ 25 ಲಕ್ಷ ಮೀರದಂತೆ | ಬಿ | ಮೂಲ ವೇತನದ ಶೇ.15 ರಷ್ಟು |
| 5 ಲಕ್ಷಕ್ಕಿಂತ ಕಡಿಮೆ | ಸಿ | ಮೂಲ ವೇತನದ ಶೇ.7.5 ರಷ್ಟು |

7.2 ರಾಜ್ಯದಲ್ಲಿನ ವಿವಿಧ ಪ್ರದೇಶಗಳಿಗೆ ಲಭ್ಯವಿರುವ ಮನೆ ಬಾಡಿಗೆ ಭತ್ಯೆ ದರಗಳನ್ನು ಕ್ರಮಬದ್ಧಗೊಳಿಸಿ ದಿನಾಂಕ 01.07.2022ಕ್ಕೂ ಪೂರ್ವದಲ್ಲಿ ಹೊರಡಿಸಲಾದ ಆದೇಶಗಳು ಈ ಮೇಲಿನ ಕಂಡಿಕೆ 7.1 ರಲ್ಲಿರುವಷ್ಟರ ಮಟ್ಟಿಗೆ ಮಾರ್ಪಾಡುಗೊಳ್ಳತಕ್ಕದ್ದು.

7.3 ಮನೆ ಬಾಡಿಗೆ ಭತ್ಯೆ ಮಂಜೂರಾತಿಗೆ ಸಂಬಂಧಿಸಿದಂತೆ ದಿನಾಂಕ: 19.10.2012ರ ಸರ್ಕಾರಿ ಆದೇಶ ಸಂಖ್ಯೆ: ಆಇ 18 ಎಸ್‌ಆರ್‌ಪಿ 2012 ರಲ್ಲಿ ವಿಧಿಸಲಾದ ಇತರ ಎಲ್ಲಾ ಷರತ್ತುಗಳು ಅಗತ್ಯ ಬದಲಾವಣೆಗಳೊಂದಿಗೆ ಮುಂದುವರೆದು ಅನ್ವಯಿಸುತ್ತವೆ.



AnyScanner

**8. ನಗರ ಪರಿಹಾರ ಭತ್ಯೆ:**

**8.1** ಈ ಕೆಳಗಿನ ತಖ್ತೆಯ ಅಂಕಣ (1)ರಲ್ಲಿ ನಮೂದಿಸಿರುವ ನಗರಗಳು/ಪಟ್ಟಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವರ್ಗದ ಸರ್ಕಾರಿ ನೌಕರರಿಗೆ ಲಭ್ಯವಿರುವ ನಗರ ಪರಿಹಾರ ಭತ್ಯೆಯು ಅವುಗಳ ಮುಂದೆ ನಮೂದಿಸಿರುವ ಅಂಕಣ (3)ರಲ್ಲಿ ನಿಗದಿಪಡಿಸಿರುವ ದರಗಳಲ್ಲಿ ಇರತಕ್ಕದ್ದು.

| ನಗರ/ಇತರ ಸ್ಥಳಗಳು | ಸರ್ಕಾರಿ ನೌಕರನು ಸೇರಿದ ಗುಂಪು | ನಗರ ಪರಿಹಾರ ಭತ್ಯೆಯ ದರ |
|---|---|---|
| (1) | (2) | (3) |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಎ & ಬಿ<br>ಸಿ & ಡಿ | ರೂ.900/-<br>ರೂ.750/- |
| ಬೆಳಗಾಂ (ಯು.ಎ.),<br>ಹುಬ್ಬಳ್ಳಿ-ಧಾರವಾಡ,<br>ಮಂಗಳೂರು (ಯು.ಎ.),<br>ಮೈಸೂರು (ಯು.ಎ.)<br>ಕಲಬುರಗಿ | ಎ & ಬಿ<br>ಸಿ & ಡಿ | ರೂ.700/-<br>ರೂ.600/- |

**8.2** ನಗರ ಪರಿಹಾರ ಭತ್ಯೆಯ ಪರಿಷ್ಕೃತ ದರಗಳನ್ನು 1ನೇ ಆಗಸ್ಟ್ 2024 ರಿಂದ ಅನ್ವಯಿಸುವಂತೆ ನಗದಾಗಿ ಪಾವತಿಸುವುದು.

**9. ನಿವೃತ್ತಿ ವೇತನ ಸೌಲಭ್ಯಗಳು:**

1ನೇ ಜುಲೈ, 2022ರ ನಂತರ, ಆದರೆ 1ನೇ ಆಗಸ್ಟ್ 2024 ಕ್ಕಿಂತ ಮುಂಚೆ ಸೇವೆಯಿಂದ ನಿವೃತ್ತನಾದ ಅಥವಾ ಸೇವೆಯಲ್ಲಿರುವಾಗಲೇ ಮೃತನಾದ ಕಾರಣದಿಂದ ಸೇವೆಯಲ್ಲಿರುವುದು ಕೊನೆಗೊಂಡ ಸರ್ಕಾರಿ ನೌಕರನ ಪ್ರಕರಣದಲ್ಲಿ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಲಾದ ವೇತನವನ್ನು, ನಿವೃತ್ತಿ ವೇತನ/ ಕುಟುಂಬ ನಿವೃತ್ತಿ ವೇತನವನ್ನು ಲೆಕ್ಕ ಹಾಕುವ ಉದ್ದೇಶಗಳಿಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು. ಆದರೆ, ನಿವೃತ್ತನಾದ ಸರ್ಕಾರಿ ನೌಕರನಿಗೆ ಅಥವಾ ಮರಣ ಹೊಂದಿದ ಸರ್ಕಾರಿ ನೌಕರರ ಫಲಾನುಭವಿಗೆ ಆರ್ಥಿಕ ಸೌಲಭ್ಯವು 1ನೇ ಆಗಸ್ಟ್ 2024 ರಿಂದ ಪ್ರಾಪ್ತವಾಗತಕ್ಕದ್ದು.

**10. ಇತರ ವಿಷಯಗಳು:**

**10.1** 1958ರ ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮೆ) ನಿಯಮಗಳ ಮೇರೆಗೆ ವಿಮಾ ಕಂತಿನ ಕನಿಷ್ಠ ದರಗಳನ್ನು, ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಮತ್ತು ಗರಿಷ್ಠ ವೇತನದ ಮಧ್ಯಮಾಂಕದ ಶೇಕಡಾ ಆರೂ ಕಾಲು (ಶೇ. 6 ¼) ಆಗಿರುವಂತೆ ಪರಿಷ್ಕರಿಸಿದೆ. ಈ ಕುರಿತು ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುವುದು.

**10.2** ಈ ಕೆಳಗಿನ ಕೋಷ್ಠಕದಲ್ಲಿ ತೋರಿಸಿರುವ ಅಂಕಣ 1ರಲ್ಲಿನ ಸರ್ಕಾರಿ ನೌಕರರ ಸಮೂಹ ವಿಮಾ ವಂತಿಗೆಯ ಪ್ರಸ್ತುತ ಮೊತ್ತವನ್ನು ಅಂಕಣ 2ರಲ್ಲಿ ತೋರಿಸಿರುವ ಮೊತ್ತಕ್ಕೆ ಪರಿಷ್ಕರಿಸತಕ್ಕದ್ದು. ಈ ಕುರಿತಂತೆ ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುವುದು.

| ಪ್ರಸ್ತುತ ವಂತಿಗೆ (EGIS) (ರೂ.ಗಳಲ್ಲಿ) | ಪರಿಷ್ಕೃತ ವಂತಿಗೆ (ರೂ.ಗಳಲ್ಲಿ) |
|---|---|
| (1) | (2) |
| 120 | 240 |
| 240 | 480 |
| 360 | 540 |
| 480 | 720 |

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ★ ಬೆಂಗಳೂರು ★

**10.3** ಪ್ರಯಾಣ ಭತ್ಯೆ ಪರಿಷ್ಕರಣೆ, ಅರ್ಹತೆ, ಇತರೆ ಭತ್ಯೆಗಳು ಮತ್ತು ಸೌಲಭ್ಯಗಳು ಇತ್ಯಾದಿ ಆದೇಶಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

**10.4** ಈ ಆದೇಶಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ಸಮಸ್ಯೆಗಳು ಕಂಡುಬಂದರೆ ಅಥವಾ ಯಾವುದೇ ಸಂದೇಹಗಳಿಗೆ ಸ್ಪಷ್ಟೀಕರಣದ ಅವಶ್ಯಕತೆ ಕಂಡುಬಂದರೆ, ಅವುಗಳನ್ನು ಸರ್ಕಾರದ ಹಣಕಾಸು ಇಲಾಖೆಗೆ ಕಳುಹಿಸಿಕೊಡಬಹುದು.

**11. ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ಶ್ರೇಣಿಗಳ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ:**



AnyScanner

**11.1** ಪರಿಷ್ಕೃತ ವೇತನ ಶ್ರೇಣಿಗಳ ಸೌಲಭ್ಯಗಳನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳಿಗೂ ಸಹ ವಿಸ್ತರಿಸಲಾಗಿರುತ್ತದೆ. ಈ ಕುರಿತಂತೆ ಆದೇಶಗಳನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳು ಪ್ರತ್ಯೇಕವಾಗಿ ಹೊರಡಿಸುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕರ್ನಾಟಕ ರಾಜ್ಯ ಸರ್ಕಾರಿ ಸಚಿವಾಲಯ ★ ಬೆಂಗಳೂರು ★

**ಡಾ|| ರೇಜು ಎಂ.ಟಿ.**
ಸರ್ಕಾರದ ಕಾರ್ಯದರ್ಶಿ (ವೆಚ್ಚ)
ಆರ್ಥಿಕ ಇಲಾಖೆ
23/8/2024

**Web site: www.finance.karnataka.gov.in**



AnyScanner

ಅನುಬಂಧ - I

**ಉದಾಹರಣೆ- 1**

ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ವೇತನದ ದೃಷ್ಟಾಂತ ಉದಾಹರಣೆ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ದ್ವಿತೀಯ ದರ್ಜೆ ಸಹಾಯಕ |
| 2. ಪ್ರಸಕ್ತ ವೇತನ ಶ್ರೇಣಿ | ರೂ.21400-500-22400-550-24600-600-27000-650-29600-750-32600-850-36000-950-39800-1100-42000 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.25,200/- |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.34100-800-35700-900-39300-1000-43300-1125-47800-1250-52800-1375-58300-1500-64300-1650-67600 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.40,300/- |
| 3. ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024 ರ ನಿಯಮ 8ರ ಉಪನಿಯಮ (1)ರನ್ವಯ ದಿನಾಂಕ 01.01.2023ರಂದು ಲಭ್ಯವಿದ್ದ ವಾರ್ಷಿಕ | ರೂ.41,300/- |



AnyScanner

| | | |
|---|---|---|
| | ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | |
| 4. | 01.01.2024 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.42,300/-<br>ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 5. | ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2024 |

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ★ ಬೆಂಗಳೂರು ★

**ಉದಾಹರಣೆ- 2**

ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ವೇತನದ ದೃಷ್ಟಾಂತ ಉದಾಹರಣೆ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಪ್ರಥಮ ದರ್ಜೆ ಸಹಾಯಕ |
| 2. ಪ್ರಸಕ್ತ ವೇತನ ಶ್ರೇಣಿ | ರೂ.27650-650-29600-750-32600-850-36000-950-39800-1100-46400-1250-52650 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.35,150/- |
| 4. 1ನೇ ಜುಲೈ 2022 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ವೇತನ ನಿಗದಿ | ರೂ.36,000/- |
| 5. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.44425-1125-47800-1250-52800-1375-58300-1500-64300-1650-74200-1900-83700 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ (ಪೂರ್ವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾದ ವಾರ್ಷಿಕ ವೇತನ ಬಡ್ತಿಯನ್ನು ಆಧರಿಸಿ ವೇತನ ನಿಗದಿ). | ರೂ.58,300/- |



AnyScanner

| | |
|---|---|
| 3. 01.07.2023 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.59,800/- |
| 4. 01.07.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.61,300/- ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 5. ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2025 |

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ★ ಬೆಂಗಳೂರು ★

ಉದಾಹರಣೆ – 3

ಅರಣ್ಯ ರಕ್ಷಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ವೇತನದ ದೃಷ್ಟಾಂತ ಉದಾಹರಣೆ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಅರಣ್ಯ ರಕ್ಷಕ |
| 2. ದಿನಾಂಕ 01.07.2022 ರಲ್ಲಿದ್ದಂತೆ ಪ್ರಸಕ್ತ ವೇತನ ಶ್ರೇಣಿ | ರೂ.21400-500-22400-550-24600-600-27000-650-29600-750-32600-850-36000-950-39800-1100-42000 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.25,800/- |
| 4. ದಿನಾಂಕ 01.08.2022 ರಿಂದ ಜಾರಿಗೆ ಬರುವಂತೆ ಉನ್ನತೀಕರಿಸಲಾದ ವೇತನ ಶ್ರೇಣಿ | ರೂ.23500-550-24600-600-27000-650-29600-750-32600-850-36000-950-39800-1100-46400-1250-47650 |
| 5. ಕ.ನಾ.ಸೇ.ನಿಯಮಗಳು, ನಿಯಮ 43 ರನ್ವಯ ಪರಿಷ್ಕರಿಸಲಾದ ವೇತನ ಶ್ರೇಣಿಯಲ್ಲಿ ವೇತನ ಪುನರ್ ನಿಗದಿ | ರೂ.25,800/- |
| 6. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ದಿನಾಂಕ 01.07.2022 ರಲ್ಲಿದ್ದಂತೆ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.34100-800-35700-900-39300-1000-43300-1125-47800-1250-52800-1375-58300-1500-64300-1650-67600 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.41,300/- |



AnyScanner

| | | |
|---|---|---|
| 3. | ದಿನಾಂಕ 01.08.2022 ರಿಂದ ಜಾರಿಗೆ ಬರುವಂತೆ ಹುದ್ದೆಗೆ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿ | ರೂ.37500-900-39300-1000-43300-1125-47800-1250-52800-1375-58300-1500-64300-1650-74200-1900-76100 |
| 4. | ಕ.ನಾ.ಸೇ.ನಿಯಮಗಳು, ನಿಯಮ 43 ರನ್ವಯ ಮೇಲ್ದರ್ಜೆಗೇರಿಸಲಾದ ವೇತನ ಶ್ರೇಣಿಯ ಸಂವಾದಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಪುನರ್ ನಿಗದಿ | ರೂ.41,300/- |
| 5. | 01.07.2023 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.42,300/- |
| 6. | 01.07.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.43,300/- ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 7. | ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2025 |



AnyScanner

**ಉದಾಹರಣೆ – 4**

ಕಛೇರಿ ಅಧೀಕ್ಷಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ವೇತನದ ದೃಷ್ಟಾಂತ ಉದಾಹರಣೆ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಕಛೇರಿ ಅಧೀಕ್ಷಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.40900-1100-46400-1250-53900-1450-62600-1650-72500-1900-78200 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.65,900/- |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.65950-1650-74200-1900-85600-2300-99400-2700-115600-3100-124900 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.1,04,800/- |
| 3. ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024 ರ ನಿಯಮ 8ರ ಉಪನಿಯಮ (1)ರನ್ವಯ ದಿನಾಂಕ 01.01.2023ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,07,500/- |
| 4. 01.07.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,10,200/-<br>ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 5. ಮುಂದಿನ ವಾರ್ಷಿಕ ವೇತನ ಬಡ್ತಿ | 1ನೇ ಜನವರಿ 2025 |



AnyScanner

ಉದಾಹರಣೆ – 5

ಲೋಕೋಪಯೋಗಿ ಇಲಾಖೆಯ ಕಿರಿಯ ಅಭಿಯಂತರರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನಿಗೆ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿ:23.02.2020 ರಿಂದ ಜಾರಿಗೆ ಬರುವಂತೆ ಹಿರಿಯ ವೇತನ ಶ್ರೇಣಿ ಮಂಜೂರು ಮಾಡಿ ವೇತನ ನಿಗದಿಪಡಿಸಲಾಗಿರುತ್ತದೆ. ಸದರಿ ನೌಕರನ ವೇತನದ ದೃಷ್ಟಾಂತ ಉದಾಹರಣೆ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಕಿರಿಯ ಅಭಿಯಂತರರು (ಲೋಕೋಪಯೋಗಿ ಇಲಾಖೆ) |
| 2. ಪ್ರಸಕ್ತ ವೇತನ ಶ್ರೇಣಿ | ರೂ.33450-850-36000-950-39800-1100-46400-1250-53900-1450-62600 |
| 3. 23ನೇ ಫೆಬ್ರವರಿ 2020ರಿಂದ ಅನ್ವಯವಾಗುವಂತೆ ಹಿರಿಯ ವೇತನ ಶ್ರೇಣಿ ಸೌಲಭ್ಯದಡಿ ಲಭ್ಯವಿರುವ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.37900-950-39800-1100-46400-1250-53900-1450-62600-1650-70850 |
| 4. 1ನೇ ಜುಲೈ 2022ರಂದು ಇದ್ದಂತೆ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ಮೂಲ ವೇತನ. | ರೂ.62,600/- |
| 5. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.54175-1375-58300-1500-64300-1650-74200-1900-85600-2300-99400 |
| 2. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.61300-1500-64300-1650-74200-1900-85600-2300-99400-2700-112900 |

| | |
|---|---|
| 3. 1ನೇ ಜುಲೈ 2022ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ವೇತನ | ರೂ.99,400/- |
| 4. 01.07.2023 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,02,100/- |
| 5. 01.07.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,04,800/- ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 6. ಮುಂದಿನ ವಾರ್ಷಿಕ ವೇತನ ಬಡ್ತಿ | 1ನೇ ಜುಲೈ 2025 |

**ಉದಾಹರಣೆ – 6**

ಲೋಕೋಪಯೋಗಿ ಇಲಾಖೆಯ ಸಹಾಯಕ ಅಭಿಯಂತರರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನಿಗೆ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿ:15.05.2021 ರಿಂದ ಜಾರಿಗೆ ಬರುವಂತೆ ಆಯ್ಕೆಕಾಲಿಕ ವೇತನ ಶ್ರೇಣಿ ಮಂಜೂರು ಮಾಡಿ ವೇತನ ನಿಗದಿಪಡಿಸಲಾಗಿರುತ್ತದೆ. ಸದರಿ ನೌಕರನ ವೇತನದ ದೃಷ್ಟಾಂತ ಉದಾಹರಣೆ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಸಹಾಯಕ ಅಭಿಯಂತರರು (ಲೋಕೋಪಯೋಗಿ ಇಲಾಖೆ) |
| 2. ಪ್ರಸಕ್ತ ವೇತನ ಶ್ರೇಣಿ | ರೂ.43100-1100-46400-1250-53900-1450-62600-1650-72500-1900-83900 |
| 3. 15ನೇ ಮೇ 2021ರಿಂದ ಅನ್ವಯವಾಗುವಂತೆ ಕಾಲಬದ್ಧ ಮುಂಬಡ್ತಿ ಯೋಜನೆಯಡಿ ಲಭ್ಯವಿರುವ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.45300-1100-46400-1250-53900-1450-62600-1650-72500-1900-83900-2200-88300 |
| 4. 1ನೇ ಜುಲೈ 2022ರಂದು ಇದ್ದಂತೆ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ಮೂಲ ವೇತನ. | ರೂ.53,900/- |
| 5. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ. 69250-1650-74200-1900-85600-2300-99400-2700-115600-3100-134200 |
| 2. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.72550-1650-74200-1900-85600-2300-99400-2700-115600-3100-134200-3500-141200 |

| | |
|---|---|
| 3. 1ನೇ ಜುಲೈ 2022ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ವೇತನ | ರೂ.85,600/- |
| 4. 01.07.2023 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.87,900/- |
| 5. 01.07.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.90,200/- ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 6. ಮುಂದಿನ ವಾರ್ಷಿಕ ವೇತನ ಬಡ್ತಿ | 1ನೇ ಜನವರಿ 2025 |

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ★ ಬೆಂಗಳೂರು ★

ಉದಾಹರಣೆ – 7

ತಾಲ್ಲೂಕು ಕಛೇರಿಯಲ್ಲಿ ರಾಜಸ್ವ ನಿರೀಕ್ಷಕರ ಹುದ್ದೆಯಲ್ಲಿ ಕಾರ್ಯನಿವರ್ಹಿಸುತ್ತಿರುವ 'B' ಎಂಬುವವರು ಹುದ್ದೆಗೆ ಅನ್ವಯಿಸುವ 2018ರ ಪರಿಷ್ಕೃತ ವೇತನ ಶ್ರೇಣಿಯ ಆಯ್ಕೆಕಾಲಿಕ ವೇತನ ಶ್ರೇಣಿ ರೂ.30350-50250 ರಲ್ಲಿ ವೇತನ ಪಡೆಯುತ್ತಿದ್ದು, ದಿನಾಂಕ 18.11.2022 ರಂದು 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ರೂ.37900-70850ರ ವೇತನ ಶ್ರೇಣಿಯ ಉಪ-ತಹಶೀಲ್ದಾರ್ ಹುದ್ದೆಗೆ ಪದೋನ್ನತಿ ಹೊಂದಿರುತ್ತಾರೆ. ನೌಕರನ ವೇತನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ ಮತ್ತು ವಾರ್ಷಿಕ ವೇತನ ಬಡ್ತಿ ದಿನಾಂಕ | ರಾಜಸ್ವ ನಿರೀಕ್ಷಕರು<br>1ನೇ ಜನವರಿ |
| 2. ಹುದ್ದೆಗೆ ಅನ್ವಯಿಸುವ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.30350-750-32600-850-36000-950-39800-1100-46400-1250-53900-1450-58250 |
| 3. 1ನೇ ಜುಲೈ 2022ರಂದು ಇದ್ದಂತೆ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ಮೂಲ ವೇತನ. | ರೂ.36,000/- |
| 4. ಉಪತಹಶೀಲ್ದಾರ್ ಹುದ್ದೆಯ ಪ್ರಸಕ್ತ ವೇತನ ಶ್ರೇಣಿ | ರೂ.37900-950-39800-1100-46400-1250-53900-1450-62600-1650-70850 |
| 5. ದಿನಾಂಕ 18.11.2022 ರಿಂದ ಅನ್ವಯವಾಗುವಂತೆ ಪದೋನ್ನತಿ ಹೊಂದಿದ ಉಪತಹಶೀಲ್ದಾರ್ ಹುದ್ದೆಯಲ್ಲಿ ನಿಗದಿಪಡಿಸಿದ ವೇತನ | ರೂ.37,900/- |
| 6. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2023 |



AnyScanner

2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.49050-1250-52800-1375-58300-1500-64300-1650-74200-1900-85600-2300-92500 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.58,300/- |
| 3. ಉಪ-ತಹಶೀಲ್ದಾರ್ ಹುದ್ದೆಗೆ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿ | ರೂ.61300-1500-64300-1650-74200-1900-85600-2300-99400-2700-112900 |
| 4. ದಿನಾಂಕ 18.11.2022 ರಿಂದ ಅನ್ವಯವಾಗುವಂತೆ ಪದೋನ್ನತಿ ಹೊಂದಿದ ಉಪ-ತಹಶೀಲ್ದಾರ್ ವೃಂದದ ಹುದ್ದೆಯಲ್ಲಿ ಕಾಲ್ಪನಿಕವಾಗಿ ವೇತನ ನಿಗದಿ | ರೂ.61,300/- |
| 5. 01.07.2023 ರಂದು ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.62,800/- |
| 6. 01.07.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.64,300/- ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 7. ಮುಂದಿನ ವಾರ್ಷಿಕ ವೇತನ ಬಡ್ತಿ | 1ನೇ ಜುಲೈ 2025 |



AnyScanner

**ಉದಾಹರಣೆ – 8**

ಜಮೇದಾರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರನ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ವೇತನದ ದೃಷ್ಟಾಂತ ಉದಾಹರಣೆ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಜಮೇದಾರ್ |
| 2. ಪ್ರಸಕ್ತ ವೇತನ ಶ್ರೇಣಿ | ರೂ.19950-450-20400-500-22400-550-24600-600-27000-650-29600-750-32600-850-36000-950-37900 |
| 3. 1ನೇ ಜುಲೈ 2022 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿ ವೇತನ ನಿಗದಿ. | ರೂ.37,900/- (ಗರಿಷ್ಠ) |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | ದಿನಾಂಕ 01.07.2023 ರಂದು ಮೊದಲನೇ ಸ್ಥಗಿತ ವೇತನ ಬಡ್ತಿ |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.31775-725-32500-800-35700-900-39300-1000-43300-1125-47800-1250-52800-1375-58300-1500-61300 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ | ರೂ.61,300/- (ಗರಿಷ್ಠ) |
| 3. ದಿನಾಂಕ 01.07.2023 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ | ರೂ.61,300+1500 ವೈವೇ |
| 4. ದಿನಾಂಕ 01.07.2024 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಎರಡನೇ ಸ್ಥಗಿತ | ರೂ.61,300+1500 ವೈವೇ+1500 ವೈವೇ |



AnyScanner

| | | |
|---|---|---|
| | ವೇತನ ಬಡ್ತಿಯನ್ನು ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ | ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 5. | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2025 |

**ಉದಾಹರಣೆ - 9**

'A' ಎಂಬ ವ್ಯಕ್ತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ದಿನಾಂಕ 10.02.2023 ರಂದು ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಕಗೊಂಡಿರುತ್ತಾರೆ. 2018ರ ಪ್ರಸಕ್ತ ವೇತನ ಶ್ರೇಣಿಯಲ್ಲಿ ಅವರ ವೇತನ ವಿವರ ಈ ಕೆಳಕಂಡಂತಿದೆ:

| | |
|---|---|
| 1. ದಿನಾಂಕ 10.02.2023 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಸಹಾಯಕ ನಿರ್ದೇಶಕರು |
| 2. ಹುದ್ದೆಗೆ ಅನ್ವಯಿಸುವ ಪ್ರಸಕ್ತ ವೇತನ ಶ್ರೇಣಿ | ರೂ.43100-1100-46400-1250-53900-1450-62600-1650-72500-1900-83900 |
| 3. ದಿನಾಂಕ 10.02.2023 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ. | ರೂ.43,100/- |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.69250-1650-74200-1900-85600-2300-99400-2700-115600-3100-134200 |
| 2. ದಿನಾಂಕ 10.02.2023 ರಿಂದ ಅನ್ವಯವಾಗುವಂತೆ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಪರಿಷ್ಕೃತ ಮೂಲ ವೇತನ. | ರೂ.69,250/- |
| 3. ದಿನಾಂಕ 01.01.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.70,900/-<br>ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 4. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2025 |



AnyScanner

**ಉದಾಹರಣೆ – 10**

2018ರ ಪ್ರಸಕ್ತ ವೇತನ ಶ್ರೇಣಿ ರೂ.52650-97100ಯ ಅಧೀನ ಕಾರ್ಯದರ್ಶಿ ಹುದ್ದೆಯನ್ನು ಧಾರಣೆ ಮಾಡಿರುವ 'G' ಎಂಬ ಅಧಿಕಾರಿಯು ಪ್ರಸಕ್ತ ವೇತನ ಶ್ರೇಣಿ ರೂ.74400-109600ರ ಉಪಕಾರ್ಯದರ್ಶಿ ಹುದ್ದೆಗೆ ದಿನಾಂಕ 21.07.2023 ರಂದು ಪದೋನ್ನತಿ ಹೊಂದಿರುತ್ತಾರೆ. ಅವರ ವೇತನ ವಿವರ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಅಧೀನ ಕಾರ್ಯದರ್ಶಿ |
| 2. ಹುದ್ದೆಗೆ ಅನ್ವಯಿಸುವ ಪ್ರಸಕ್ತ ವೇತನ ಶ್ರೇಣಿ | ರೂ.52650-1250-53900-1450-62600-1650-72500-1900-83900-2200-97100 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ. | ರೂ.67,550/- |
| 4. ದಿನಾಂಕ 01.07.2023 ರಂದು ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಿ ವೇತನ ನಿಗದಿ | ರೂ.69,200/- |
| 5. ಉಪಕಾರ್ಯದರ್ಶಿ ಹುದ್ದೆಯ ಪ್ರಸಕ್ತ ವೇತನ ಶ್ರೇಣಿ | ರೂ.74400-1900-83900-2200-97100-2500-109600 |
| 6. ದಿನಾಂಕ 21.07.2023 ರಿಂದ ಅನ್ವಯಿಸುವಂತೆ ಪದೋನ್ನತಿ ಹೊಂದಿದ ಉಪಕಾರ್ಯದರ್ಶಿ ಹುದ್ದೆಯಲ್ಲಿ ನಿಗದಿಪಡಿಸಿದ ವೇತನ | ರೂ.74,400/- |
| 7. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜುಲೈ 2024 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಅಧೀನ ಕಾರ್ಯದರ್ಶಿ ಹುದ್ದೆಗೆ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿ | ರೂ.83700-1900-85600-2300-99400-2700-115600-3100-134200-3500-155200 |

| | |
|---|---|
| 2. ದಿನಾಂಕ 01.07.2022ರಂದು ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಿದ ಮೂಲ ವೇತನ. | ರೂ.1,07,500/- |
| 3. ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ 01.07.2023 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,10,200/- |
| 4. ಉಪಕಾರ್ಯದರ್ಶಿ ಹುದ್ದೆಗೆ ಅನ್ವಯಿಸುವ ಪರಿಷ್ಕೃತ ವೇತನ ಶ್ರೇಣಿ. | ರೂ.118700-3100-134200-3500-155200-4000-175200 |
| 5. ದಿನಾಂಕ 21.07.2023 ರಿಂದ ಅನ್ವಯಿಸುವಂತೆ ಪದೋನ್ನತಿ ವೃಂದದ ಹುದ್ದೆಯಲ್ಲಿ ಕಾಲ್ಪನಿಕವಾಗಿ ಪುನರ್ ನಿಗದಿಪಡಿಸಲಾದ ವೇತನ | ರೂ.1,18,700/- |
| 6. ದಿನಾಂಕ 01.07.204 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ | ರೂ.1,21,800/- ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 7. ಮುಂದಿನ ವಾರ್ಷಿಕ ವೇತನ ಬಡ್ತಿ | 1ನೇ ಜುಲೈ 2025 |

**ಉದಾಹರಣೆ – 11**

ಕೃಷಿ ನಿರ್ದೇಶಕರ ಹುದ್ದೆಯನ್ನು ಧಾರಣೆ ಮಾಡಿರುವ 'M' ಎಂಬ ಅಧಿಕಾರಿಯು ದಿನಾಂಕ 31.12.2022 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಅವರ ವೇತನ ವಿವರ ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಕೃಷಿ ನಿರ್ದೇಶಕರು |
| 2. ಪ್ರಸಕ್ತ ವೇತನ ಶ್ರೇಣಿ | ರೂ.97100-2500-112100-2800-128900-3100-141300 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ. | ರೂ.1,38,200/- |
| 4. ವಯೋ ನಿವೃತ್ತಿ ದಿನಾಂಕ | 31.12.2022 (ಪ್ರಸಕ್ತ ವೇತನ ಶ್ರೇಣಿಯ ಉಪಲಬ್ಧಗಳ ಆಧಾರದ ಮೇಲೆ ಪಿಂಚಣಿ ಸೌಲಭ್ಯಗಳನ್ನು ಲೆಕ್ಕಹಾಕತಕ್ಕದ್ದು). |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.155200-4000-179200-4500-206200-5000-226200 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ. | ರೂ.2,21,200/- |
| 3. ವಯೋ ನಿವೃತ್ತಿ ದಿನಾಂಕ | 31.12.2022. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಲಾದ ಅಂತಿಮ ಮೂಲ ವೇತನವನ್ನು ಮೂಲ ಪಿಂಚಣಿ ನಿಗದಿಯ ಉದ್ದೇಶಕ್ಕೆ ಮಾತ್ರ ಪರಿಗಣಿಸತಕ್ಕದ್ದು. |
| 4. ಪರಿಷ್ಕೃತ ಪಿಂಚಣಿಗೆ ಅರ್ಹತಾ ದಿನಾಂಕ | 1ನೇ ಆಗಸ್ಟ್ 2024 |



AnyScanner

ಉದಾಹರಣೆ – 12

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀಮತಿ 'S' ಎಂಬುವವರು ಹುದ್ದೆಗೆ ಅನ್ವಯಿಸುವ 2018ರ ಪರಿಷ್ಕೃತ ವೇತನ ಶ್ರೇಣಿಯ ಪ್ರಸಕ್ತ ಹಿರಿಯ ವೇತನ ಶ್ರೇಣಿ ರೂ.30350-58250 ರಲ್ಲಿ ವೇತನವನ್ನು ಪಡೆಯುತ್ತಿರುತ್ತಾರೆ. ಶ್ರೀಮತಿ 'S' ಎಂಬುವವರಿಗೆ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ದಿನಾಂಕ 01.01.2023 ರಂದು 4ನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿರುತ್ತದೆ. ನೌಕರರ ವೇತನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಪ್ರಾಥಮಿಕ ಶಾಲಾ ಶಿಕ್ಷಕರು |
| 2. ಹುದ್ದೆಗೆ ಅನ್ವಯಿಸುವ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.30350-750-32600-850-36000-950-39800-1100-46400-1250-53900-1450-58250 |
| 3. 1ನೇ ಜುಲೈ 2022ರಂದು ಇದ್ದಂತೆ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ಮೂಲ ವೇತನ (3ನೇ ಸ್ಥ.ವೇ.ಬ. ಪಡೆದ ನಂತರ). | ರೂ.58,250+4350 ವೈವೇ |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | ರೂ.49050-1250-52800-1375-58300-1500-64300-1650-74200-1900-85600-2300-92500 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ. | ರೂ.92,500+6900 ವೈವೇ |

| | |
|---|---|
| 3. ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024 ರ ನಿಯಮ 8ರ ಉಪನಿಯಮ (1)ರನ್ವಯ ದಿನಾಂಕ 01.01.2023ರಂದು ಲಭ್ಯವಿದ್ದ 4ನೇ ಸ್ಥ.ವೇ.ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.92,500+ 6900 ವೈವೇ + 2300 ವೈವೇ |
| 4. ದಿ: 01.01.2024 ರಂದು 5ನೇ ಸ್ಥ.ವೇ.ಬಡ್ತಿಯನ್ನು ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.92,500+ 6900 ವೈವೇ +2300 ವೈವೇ + 2300 ವೈವೇ<br>ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 5. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 7ನೇ ಸ್ಥ.ವೇ.ಬಡ್ತಿ ದಿನಾಂಕ 1ನೇ ಜನವರಿ 2025 |



AnyScanner

**ಉದಾಹರಣೆ – 13**

ಸರ್ಕಾರಿ ಪ್ರೌಢ ಶಾಲೆಯಲ್ಲಿ ಸಹ ಶಿಕ್ಷಕರಾಗಿರುವ ಶ್ರೀ 'P' ಎಂಬುವವರು ಹುದ್ದೆಗೆ ಅನ್ವಯಿಸುವ 2018ರ ಪರಿಷ್ಕೃತ ವೇತನ ಶ್ರೇಣಿಯ ಪ್ರಸಕ್ತ ಹಿರಿಯ ವೇತನ ಶ್ರೇಣಿ ರೂ.32900-70850 ರಲ್ಲಿ ವೇತನವನ್ನು ಪಡೆಯುತ್ತಿರುತ್ತಾರೆ. ಶ್ರೀ 'P' ಯವರಿಗೆ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ 30 ವರ್ಷಗಳ ಸೇವೆಗಾಗಿ 3ನೇ ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ 16.08.2023 ರಂದು ಮಂಜೂರು ಮಾಡಲಾಗಿರುತ್ತದೆ. ಶ್ರೀ 'P' ಯವರು ದಿನಾಂಕ 31.07.2024 ರಂದು ಸೇವೆಯಿಂದ ವಯೋನಿವೃತ್ತರಾಗಿರುತ್ತಾರೆ. ನೌಕರರ ವೇತನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಸಹ ಶಿಕ್ಷಕರು (ಸರ್ಕಾರಿ ಪ್ರೌಢ ಶಾಲೆ) |
| 2. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪ್ರಸಕ್ತ ವೇತನ ಶ್ರೇಣಿ. | ರೂ.37900-950-39800-1100-46400-1250-53900-1450-62600-1650-70850 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ (4ನೇ ಸ್ಥ.ವೇ.ಬ. ಪಡೆದ ನಂತರ). | ರೂ.70850 + 1650 ವೈವೇ+1650 ವೈವೇ |
| 4. ದಿ:01.07.2023 ರಿಂದ ಜಾರಿಗೆ ಬರುವಂತೆ 5ನೇ ಸ್ಥ.ವೇ.ಬಡ್ತಿ ಮಂಜೂರು ಮಾಡಿ ನಿಗದಿಪಡಿಸಲಾದ ವೇತನ. | ರೂ.70850 + 1650 ವೈವೇ+1650 ವೈವೇ + 1650 ವೈವೇ |
| 5. 30 ವರ್ಷಗಳ ಸೇವೆಗಾಗಿ ದಿ:16.08.2023 ರಿಂದ ಜಾರಿಗೆ ಬರುವಂತೆ 3ನೇ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿ ನಿಗದಿಪಡಿಸಲಾದ ವೇತನ. | ರೂ.70850 + 1650 ವೈವೇ+1650 ವೈವೇ + 1650 ವೈವೇ+1650 ವೈವೇ |
| 6. ದಿ:01.07.2024 ರಿಂದ ಜಾರಿಗೆ ಬರುವಂತೆ 6ನೇ ಸ್ಥ.ವೇ.ಬಡ್ತಿ ಮಂಜೂರು ಮಾಡಿ ವೇತನ ನಿಗದಿ | ರೂ.70850 + 1650 ವೈವೇ+1650 ವೈವೇ + 1650 ವೈವೇ+1650 ವೈವೇ+1650 ವೈವೇ |
| 7. ವಯೋ ನಿವೃತ್ತಿ ದಿನಾಂಕ | 31.12.2022 (ಪ್ರಸಕ್ತ ವೇತನ ಶ್ರೇಣಿಯ ಉಪಲಬ್ದಗಳ ಆಧಾರದ ಮೇಲೆ ಪಿಂಚಣಿ ಸೌಲಭ್ಯಗಳನ್ನು ಲೆಕ್ಕಹಾಕತಕ್ಕದ್ದು). |



AnyScanner

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ | 61300-1500-64300-1650-74200-1900-85600-2300-99400-2700-112900 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ. | ರೂ.1,12,900+5400 ವೈವೇ |
| 3. ದಿ:1.7.2023 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ 5ನೇ ಸ್ಥ.ವೇ.ಬಡ್ತಿಯನ್ನು ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,12,900+5400 ವೈವೇ+2700 ವೈವೇ |
| 4. 30 ವರ್ಷಗಳ ಸೇವೆಗಾಗಿ ದಿ:16.08.2023 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ 3ನೇ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,12,900+5400 ವೈವೇ+2700 ವೈವೇ + 2700 ವೈವೇ |
| 5. ದಿ:1.7.2024 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಯಲ್ಲಿ 6ನೇ ಸ್ಥ.ವೇ.ಬಡ್ತಿಯನ್ನು ಮಂಜೂರು ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.1,12,900+5400 ವೈವೇ+2700 ವೈವೇ + 2700 ವೈವೇ+2700ವೈವೇ<br>ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಲಾದ ಅಂತಿಮ ಮೂಲ ವೇತನವನ್ನು ಮೂಲ ಪಿಂಚಣಿ ನಿಗದಿಯ ಉದ್ದೇಶಕ್ಕೆ ಮಾತ್ರ ಪರಿಗಣಿಸತಕ್ಕದ್ದು.<br>ಪರಿಷ್ಕೃತ ಪಿಂಚಣಿಯ ಆರ್ಥಿಕ ಲಾಭವು ದಿ:01.08.2024 ರಿಂದ ಪ್ರಾಪ್ತವಾಗುತ್ತದೆ. |
| 6. ವಯೋ ನಿವೃತ್ತಿ ದಿನಾಂಕ | 31.07.2024. |

ಉದಾಹರಣೆ – 14

2018ರ ಪರಿಷ್ಕೃತ ವೇತನ ಶ್ರೇಣಿಯ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ ರೂ.33450-62600ರಲ್ಲಿ ವೇತನ ಪಡೆಯುತ್ತಿರುವ ಶ್ರೀ 'Z ' ಎಂಬ ಸಹಾಯಕ ಪೊಲೀಸ್ ಸಬ್-ಇನ್ಸ್ ಪೆಕ್ಟರ್ ದಿ:17.03.2024 ರಂದು ಪೊಲೀಸ್ ಸಬ್-ಇನ್ಸ್ ಪೆಕ್ಟರ್ ಹುದ್ದೆಗೆ ಪದೋನ್ನತಿ ಹೊಂದಿರುತ್ತಾರೆ. ನೌಕರರ ವೇತನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಸಹಾಯಕ ಪೊಲೀಸ್ ಸಬ್-ಇನ್ಸ್ ಪೆಕ್ಟರ್ |
| 2. ಹುದ್ದೆಗೆ ಅನ್ವಯವಾಗುವ ಪ್ರಸಕ್ತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.33450-850-36000-950-39800-1100-46400-1250-53900-1450-62600 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಮೂಲ ವೇತನ | ರೂ.45,300/- |
| 4. ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿಯ ದಿನಾಂಕ | 1ನೇ ಜನವರಿ 2023 |

**2024ನೇ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸರ್ಕಾರಿ ನೌಕರನ ವೇತನವನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿದೆ:**

| | |
|---|---|
| 1. ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿ | ರೂ.54175-1375-58300-1500-64300-1650-74200-1900-85600-2300-99400 |
| 2. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ. | ರೂ.72,550/- |
| 3. ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2024 ರ ನಿಯಮ 8ರ ಉಪನಿಯಮ (1)ರನ್ವಯ ದಿನಾಂಕ 01.01.2023ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.74,200/- |

| | |
|---|---|
| 4. ದಿ:1.7.2024 ರಂದು ಲಭ್ಯವಿರುವ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆ ಮಾಡಿ ಕಾಲ್ಪನಿಕವಾಗಿ ವೇತನ ನಿಗದಿ. | ರೂ.76,100/- |
| 5. ಪದೋನ್ನತಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿ ರೂ.61300-1,12,900ರಲ್ಲಿ ದಿನಾಂಕ 17.03.2024 ರಿಂದ ಜಾರಿಗೆ ಬರುವಂತೆ ಕ.ನಾ.ಸೇ.ನಿಯಮ 42ಬಿ ರನ್ವಯ ಕಾಲ್ಪನಿಕವಾಗಿ ವೇತನ ಪುನರ್ ನಿಗದಿ. | ರೂ.78,000/-<br>ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 6. ಮುಂದಿನ ವಾರ್ಷಿಕ ವೇತನ ಬಡ್ತಿ | 1ನೇ ಜನವರಿ 2025 |



AnyScanner

ಉದಾಹರಣೆ - 15

2018ರ ಪರಿಷ್ಕೃತ ವೇತನ ಶ್ರೇಣಿ ರೂ.43100-83900ರಲ್ಲಿ ರೂ.52,650 ಮೂಲ ವೇತನವನ್ನು ಪಡೆಯುತ್ತಿರುವ ಶ್ರೀಮತಿ 'R' ಎಂಬ ಶಾಖಾಧಿಕಾರಿಯು, ವೇತನ ಶ್ರೇಣಿ ರೂ.52650-97100ಯ ಅಧೀನ ಕಾರ್ಯದರ್ಶಿ ಹುದ್ದೆಗೆ ದಿ:14.06.2022 ರಂದು ಪದೋನ್ನತಿಯನ್ನು ಹೊಂದಿರುತ್ತಾರೆ. ಪದೋನ್ನತಿಯ ನಂತರ ಅವರ ವೇತನವನ್ನು ದಿ:14.06.2022 ರಿಂದ ಜಾರಿಗೆ ಬರುವಂತೆ ರೂ.53,900ಕ್ಕೆ ನಿಗದಿಪಡಿಸಲಾಗಿದೆ. ಅಧಿಕಾರಿಯ ವೇತನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| 1. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಯ ಪದನಾಮ | ಅಧೀನ ಕಾರ್ಯದರ್ಶಿ |
| 2. 1ನೇ ಜುಲೈ 2022 ರಂದು ಧಾರಣೆ ಮಾಡಿದ ಹುದ್ದೆಗೆ ಅನ್ವಯವಾಗುವ ಪ್ರಸಕ್ತ ವೇತನ ಶ್ರೇಣಿ | ರೂ.52650-1250-53900-1450-62600-1650-72500-1900-83900-2200-97100 |
| 3. 1ನೇ ಜುಲೈ 2022 ರಂದು ಇದ್ದಂತೆ ಪ್ರಸಕ್ತ ಅಧೀನ ಕಾರ್ಯದರ್ಶಿ ಹುದ್ದೆಯಲ್ಲಿ ಮೂಲ ವೇತನ. | ರೂ.53,900/- |
| 4. 1ನೇ ಜುಲೈ 2022 ರಿಂದ ಅನ್ವಯವಾಗುವಂತೆ ಅಧೀನ ಕಾರ್ಯದರ್ಶಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ. | ರೂ.83700-1900-85600-2300-99400-2700-115600-3100-134200-3500-155200 |
| 5. 1ನೇ ಜುಲೈ 2022 ರಿಂದ ಜಾರಿಗೆ ಬರುವಂತೆ ಅಧೀನ ಕಾರ್ಯದರ್ಶಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಬೇಕಾದ ಮೂಲ ವೇತನ. | ರೂ.85,600/- |
| 6. ದಿ:14.06.2022 ರಂದು ಪಡೆಯುತ್ತಿದ್ದ ಪ್ರಸಕ್ತ ಮೂಲ ವೇತನ ರೂ.52,650ನ್ನು ಆಧಾರವಾಗಿರಿಸಿ ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿ ರೂ.69,250-1,34,200ರಲ್ಲಿ ಕಾಲ್ಪನಿಕವಾಗಿ ನಿಗದಿಪಡಿಸಿದ ಮೂಲ ವೇತನ. | ರೂ.83,700/- |



AnyScanner

| | |
|---|---|
| 7. ಕೆಳಗಿನ ಶಾಖಾಧಿಕಾರಿ ಹುದ್ದೆಯ ಪ್ರಸಕ್ತ ವೇತನ ಶ್ರೇಣಿಯಲ್ಲಿ 01.01.2023 ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿ ಕ.ನಾ.ಸೇ.(ಪ.ವೇ.) ನಿಯಮಗಳು,2018ರ ನಿಯಮ 8(1)ರನ್ವಯ ಶಾಖಾಧಿಕಾರಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಪುನರ್ ನಿಗದಿ. | ರೂ.85,600/- |
| 8. ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 42ಬಿ(2)ರನ್ವಯ ಕೆಳಗಿನ ಹುದ್ದೆಯಾದ ಶಾಖಾಧಿಕಾರಿ ಹುದ್ದೆಯಲ್ಲಿ ದಿ:01.01.2024ರಂದು ಲಭ್ಯವಿದ್ದ ವಾರ್ಷಿಕ ವೇತನ ಬಡ್ತಿಯನ್ನು ಆಧರಿಸಿ ಅಧೀನ ಕಾರ್ಯದರ್ಶಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಪುನರ್ ನಿಗದಿ. | ರೂ.87,900/-<br>ಆರ್ಥಿಕ ಸೌಲಭ್ಯವು 01.08.2024 ರಿಂದ ಪ್ರಾಪ್ತವಾಗುತ್ತದೆ. |
| 9. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವೇತನ ಬಡ್ತಿ | 1ನೇ ಜನವರಿ 2025 |

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ★ ಬೆಂಗಳೂರು ★



AnyScanner

ಅನುಬಂಧ – II

ನಮೂನೆ

| ಸರ್ಕಾರಿ ನೌಕರನ ಹೆಸರು ಮತ್ತು ದಿ:01.07.2022 ರಂದು ಧಾರಣೆ ಮಾಡಿದ ಹುದ್ದೆ | ದಿ:01.07.2022 ರಂದು ಇದ್ದಂತೆ ಹುದ್ದೆಗೆ ಅನ್ವಯವಾಗುವ ಪ್ರಸ್ತುತ ವೇತನ ಶ್ರೇಣಿ/ ಆಯ್ಕೆಕಾಲಿಕ ವೇತನ ಶ್ರೇಣಿ | ದಿ:01.07.2022 ರಂದು ಇದ್ದಂತೆ ಪ್ರಸಕ್ತ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ಮೂಲ ವೇತನ | ಪ್ರಸಕ್ತ ವೇತನ ಶ್ರೇಣಿಯಲ್ಲಿ ಮುಂದಿನ ವಾರ್ಷಿಕ ವೇತನ ಬಡ್ತಿ/ಸ್ಥ.ವೇ.ಬ. ದಿನಾಂಕ | ಹುದ್ದೆಗೆ ಅನ್ವಯ ವಾಗುವ ಪರಿಷ್ಕೃತ ವೇತನ ಶ್ರೇಣಿ | ದಿ:01.07.2022 ರಿಂದ ಜಾರಿಗೆ ಬರುವಂತೆ ಪ್ರಸಕ್ತ ವೇತನ ಶ್ರೇಣಿಯ ಮೂಲ ವೇತನಕ್ಕೆ ಸಂವಾದಿಯಾಗಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಿದ ವೇತನ | ಕ.ನಾ.ಸೇ.(ಪ.ವೇ.)ನಿ.2024ರ ನಿಯಮ 8(1) ರನ್ವಯ ವೇತನ ಪುನರ್ ನಿಗದಿಯು ಪ್ರಯೋಜನಕಾರಿಯೇ? ಹಾಗಿದ್ದರೆ, ಪುನರ್ ನಿಗದಿಪಡಿಸಿದ ವೇತನ ಮತ್ತು ಅಂತಹ ಪುನರ್ ನಿಗದಿಯ ದಿನಾಂಕ | 01.07.2022 ರಂದು ವೇತನ ನಿಗದಿಯ ನಂತರದಲ್ಲಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಲಾದ ವೇತನ | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | 1. ದಿ: ...ಜುಲೈ 2023 ವಾವೇ/ಸ್ಥವೇಬ<br>2. ದಿ: ...ಜನವರಿ/ಜುಲೈ 2024 ವಾವೇ/ಸ್ಥವೇಬ; ಆಸೌ ದಿ:01.08.2024 ರಿಂದ ಅನ್ವಯ<br>ಟಿಪ್ಪಣಿ: ದಿ:01.07.2022 ರಿಂದ ದಿ:31.07.2024ರ ಅವಧಿಯಲ್ಲಿ ಪದೋನ್ನತಿ / ಉನ್ನತೀಕರಣದ ಕಾರಣಕ್ಕೆ ಮಾಡಲಾದ ಪುನರ್ ನಿಗದಿಯನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. | |

ಅಡಿ ಟಿಪ್ಪಣಿ: ವಾವೇ = ವಾರ್ಷಿಕ ವೇತನ ಬಡ್ತಿ, ಸ್ಥವೇಬ = ಸ್ಥಗಿತ ವೇತನ ಬಡ್ತಿ, ಆಸೌ = ಆರ್ಥಿಕ ಸೌಲಭ್ಯ

ಸರ್ಕಾರಿ ಆದೇಶದ 4ನೇ ಕಂಡಿಕೆಯಲ್ಲಿ ನಮೂದಿಸಿದ ಪ್ರಾಧಿಕಾರದ ಸಹಿ.

ಪದನಾಮ

ದಿನಾಂಕ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ★ ಬೆಂಗಳೂರು ★

(ಡಾ|| ರೇಜು ಎಂ.ಟಿ.)
ಸರ್ಕಾರದ ಕಾರ್ಯದರ್ಶಿ (ವೆಚ್ಚ)
ಆರ್ಥಿಕ ಇಲಾಖೆ.

23/8/2024



AnyScanner